


### ಹೋರಾಟದ ಅಂತರಂಗ ಬಹಿರಂಗ

'ಅಣ್ಣಾ ಎಂಬ ಮಂತ್ರದಂಡ' ಬಿ.ಎಂ.ಹನೀಫ್ ಲೇಖನ ಯಥಾರ್ಥವಾಗಿದೆ. ಅಣ್ಣಾ ಹೋರಾಟದ ಅಂತರಂಗ-ಬಹಿರಂಗದ ಎಲ್ಲ ಮುಖಗಳನ್ನೂ ಅವಲೋಕಿಸಿದ್ದೀರಿ.

–ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ/ ಡಾ.ಕೆ.ಕೆ.ಜಯಚಂದ್ರಗುಪ್ತ, ಹಾಸನ/ ಕೋಟೇಶ್ವರ ಸೂರ್ಯನಾರಾಯಣ ರಾವ್, ಜಿ.ಕೆ.ಶ್ರೀಮತಿ, ಬೆಂಗಳೂರು/ ಟಿ.ಎನ್.ಸರಸ್ವತಿ, ತಿಪಟೂರು/ ಬಿ.ಎಸ್. ಮುಳ್ಳೂರ, ಹಲಗತ್ತಿ/ ರಾಜೇಂದ್ರ ಹೆಗಡೆ, ಹಾವೇರಿ/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಮುಕುಂದ ಹೆರಕಲ್ಲ, ವಾಡಿ/ ಕುರುಡಿ ರಾಘವೇಂದ್ರ, ತುಮಕೂರು

### ಜನಸಂಖ್ಯೆ ಪ್ರಾತಿನಿಧಿಕ

ಅಣ್ಣಾ ಹಜಾರೆಯವರ ಆಂದೋಳನದಲ್ಲಿ ಭಾಗವಹಿಸಿದವರ ಸಂಖ್ಯೆ ಒಟ್ಟು ಜನಸಂಖ್ಯೆಯಲ್ಲಿ ಕಡಿಮೆ ಎಂದಿದ್ದೀರಿ. ಯಾವುದೇ ಆಂದೋಳನ ಹೀಗೆಯೇ ಅಲ್ಲವೆ? ಸ್ವಾತಂತ್ರ್ಯಾಂದೋಳನದಲ್ಲಿ ಸಾಕ್ಷಾತ್ತಾಗಿ ಭಾಗವಹಿಸಿದವರ ಸಂಖ್ಯೆಯೂ ಅಂದಿನ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಬಹಳ ಕಡಿಮೆಯೇ. ಆದರೆ ಹಾಗೆ ಭಾಗವಹಿಸಿದವರು ಒಟ್ಟು ಜನಮನವನ್ನು ಪ್ರತಿನಿಧಿಸಿದವರೆಂದು ಹೇಳಬಹುದು.

ಇನ್ನು ಹಣದ ಹರಿವು: ಗಾಂಧೀಜಿಯವರ ಚಳವಳಿಯೂ ಬರಿಗೈಯಿಂದ ನಡೆಯಲಿಲ್ಲ. ಇದನ್ನೇ ದೊಡ್ಡದು ಮಾಡುವ ಅಗತ್ಯ ಇಲ್ಲ. ಹರಿದು ಬಂದ ಹಣ ಗುಳುಂ ಆಗದಂತೆ ಎಚ್ಚರ ವಹಿಸಿದರೆ ಸಾಕು.

–ಸಾಮಗ ದತ್ತಾತ್ರಿ, ಬೆಂಗಳೂರು

### ಉತ್ತಮ ವ್ಯಾಖ್ಯಾನ

ವಿಚಾರ ಲಹರಿಯಲ್ಲಿ ರಾಜಕಾರಣಿ-ರಾಜನೀತಿಜ್ಞರ ವ್ಯತ್ಯಾಸವನ್ನು ವೈನತೇಯರು ಚೆನ್ನಾಗಿ ವಿಶ್ಲೇಷಿಸಿದ್ದಾರೆ.

–ವಿಶ್ವನಾಥ ಪತಂಗೆ, ಗುಲಬರ್ಗಾ

### ಉಪಯುಕ್ತ ಮಾಹಿತಿ

ಹಲ್ಲುಗಳ ಬಗ್ಗೆ ಡಾ.ಪರಪ್ಪ ಸಜ್ಜನರ ಬರಹ ಉಪಯುಕ್ತ ಮಾಹಿತಿ.

–ಪಿ.ಎನ್.ಶ್ರೀವತ್ಸ, ಬೆಂಗಳೂರು

### ಉಪನಿಷತ್ತು

'ಸಿದ್ಧೇಶ್ವರ ಶ್ರೀ 70' (ಎಸ್.ಎಂ. ಜಂಬುಕೇಶ್ವರ), ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರ ಪ್ರವಚನ ಪ್ರಪಂಚವನ್ನು 'ಸಿದ್ಧೇಶ್ವರೋಪನಿಷತ್ತು' ಎಂದು ಕರೆಯಬಹುದು! (ಶ್ರೀ ರಾಮಕೃಷ್ಣ ಪರಮಹಂಸರ ಉಪದೇಶಾವಳಿಗೆ ಸಿ. ರಾಜಗೋಪಾಲಾಚಾರಿ 'ಶ್ರೀ ರಾಮಕೃಷ್ಣ ಉಪನಿಷತ್' ಎಂಬ ಹೆಸರು ಕೊಟ್ಟಿದ್ದಾರೆ) ಅಂದ ಹಾಗೆ, ಜಗತ್ತು ಪೂರ್ತಿ ಕೆಟ್ಟಿಲ್ಲ!

–ಸಿ.ಪಿ.ಕೆ., ಮೈಸೂರು

### ನಡೆದಾಡುವ ದೇವರು

ನಡೆದಾಡುವ ದೇವರು ಎಂದೇ ಖ್ಯಾತರಾಗಿರುವ 'ಸಿದ್ಧೇಶ್ವರ ಶ್ರೀ 70' ಕುರಿತು ಲೇಖನ ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

ಶಂಕರ ಈ. ಹೆಬ್ಬಾಳ, ಮುದ್ದೇಬಿಹಾಳ/ ನಾರಾಯಣ ಯಾಜಿ, ಶಿರಾಲಿ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಕೊಹಿಮ, ಬಸರಕೋಡು/ ಎಚ್.ಎಸ್.ವಿಶ್ವನಾಥ, ಶಿವಮೊಗ್ಗ

### ಮರಣದಂಡನೆ ಸಮರ್ಥನೆಯೂ ಇದೆ

ವಾಲಿಯು ಸುಗ್ರೀವನನ್ನು ರಾಜ್ಯದಿಂದ ಹೊರಹಾಕಿದ ಬಳಿಕ ಆತನ ಪತ್ನಿ ರುಮೆಯಲ್ಲಿ ಆಸಕ್ತನಾಗಿದ್ದರ ಬಗ್ಗೆ ವಾಲ್ಮೀಕಿ ರಾಮಾಯಣದಲ್ಲಿಯೇ ಬಂದಿದೆ ಎಂದು 'ರಾಜಧರ್ಮ' ಕಥೆಗಾರ ಬಿ. ತಿಪ್ಪಣ್ಣ ಮರಿಕುಂಟೆ ಬರೆದಿದ್ದಾರೆ. ಆದರೆ ಅದಕ್ಕೆ ಕಾರಣವೂ ಇದೆ. ನೀನು ತಮ್ಮನ ಹೆಂಡತಿಯೊಡನೆ ಸಂಬಂಧ ಇಟ್ಟುಕೊಂಡುದಕ್ಕಾಗಿ ನಿನಗೆ ಈ ಮರಣದಂಡನೆಯನ್ನು ವಿಧಿಸಲಾಗಿದೆ ಎಂದು ಶ್ರೀ ರಾಮಚಂದ್ರ ಹೇಳಿರುವ ಮಾತುಗಳು ಸಹ ಇಲ್ಲಿ ಬಂದಿವೆ.

–ಅಜಾರು ನಾಗರಾಜ ರಾಯ, ಕಟೀಲು

### ಮತ್ತೆ ಮತ್ತೆ ನೋಡುವ ಚಿತ್ರ

ವಿಧಾನ ಸೌಧಾ... ಪರಪ್ಪನ್ ಅಗ್ರಹಾರಾ... ಎಂದು ಆಟೋ ಡ್ರೈವರ್ ಕೂಗುತ್ತಿರುವ ದೃಶ್ಯ ಹಾಗೂ ಪುಡಾರಿತನವನ್ನು ಬಿಂಬಿಸುವ ಪಿ. ಮಹಮ್ಮದ್‌ರ ಕಾರ್ಟೂನ್ ಅದ್ಭುತವಾಗಿತ್ತು. ಮತ್ತೆ ಮತ್ತೆ ನೋಡುವಂತಿತ್ತು.

–ಪಿ.ಜೆ. ರಾಘವೇಂದ್ರ, ಮೈಸೂರು

### ಉತ್ತಮ ಕಥೆ

ನಾ. ಡಿಸೋಜರವರ 'ಸಾವಿನ ಸಮ್ಮುಖದಲ್ಲಿ' ಕಥೆ ಚೆನ್ನಾಗಿದೆ. ಕ್ಷಮಿಸುವಂತಹ ದೈವೀ ಗುಣವುಳ್ಳ ಇನಾಸನೇ ಪಾದ್ರಿಗಳಿಗಿಂತ ದೊಡ್ಡವನಾಗಿ ಮೆರೆದದ್ದು, ನಂತರ ಪಾದ್ರಿಯವರ ಮನ ಪರಿವರ್ತನೆ ಆದದ್ದು ಚೆನ್ನಾಗಿ ಚಿತ್ರಣಗೊಂಡಿದೆ.

–ಸು. ವಿಜಯಲಕ್ಷ್ಮಿ, ಎಚ್.ಎಸ್.ವಿಶ್ವನಾಥ, ಶಿವಮೊಗ್ಗ

### ಮನ ನೋಯಿಸಿದ ಉತ್ತರ

ಸೆ. 1ರ 'ಸುಧಾ'ದ ನೀವು ಕೇಳಿದಿರಿ? ಅಂಕಣದಲ್ಲಿ ಗಣಪತಿಗೆ ಆತನ ಕಡಿದ ತಲೆಯ ಬದಲು ಆನೆಯ ತಲೆಯನ್ನು ಏಕೆ ಜೋಡಿಸಲಾಯಿತು ಎಂಬ ಪ್ರಶ್ನೆಗೆ ರಾಮ್ ನೀಡಿದ ಉತ್ತರ 'ಮೊದಲೇ ಕೊಳೆಯಿಂದ ಮಾಡಿದ ತಲೆ ನೆಲಕ್ಕೆ ಬಿದ್ದು ತೊಳೆಯಲಾಗದಷ್ಟು ಕೊಳೆಯಾಗಿತ್ತಂತೆ' –ಆಸ್ತಿಕ ವರ್ಗದವರ ಮನನೋಯಿಸಿದೆ.

–ದೀಪಕ್, ಕುಂದಾಪುರ

### ಸೊಗಸಾದ ಚಿತ್ರಬರಹ

'ಕೈಬೀಸಿ ಕರೆಯುತಿದೆ ಕರಿಘಟ್ಟ' ಅಶೋಕ ಉಚ್ಚಂಗಿಯವರ ಚಿತ್ರಬರಹ ಸೊಗಸಾಗಿ ಮೂಡಿಬಂದಿದೆ.

ನೆ.ಲ.ರಾಂ, ಬೆಂಗಳೂರು

### ಪಾಪು ಕಥಾ ಪುರಸ್ಕಾರಕ್ಕೆ ಹಸ್ತಪ್ರತಿ ಆಹ್ವಾನ

ಹಾನಗಲ್ಲ ಕನ್ನಡ ಯುವಜನ ಕ್ರಿಯಾ ಸಮಿತಿಯು 2011ನೇ ಸಾಲಿನ 'ಡಾ. ಪಾಟೀಲ ಪುಟ್ಟಪ್ಪ ಕಥಾ ಪುರಸ್ಕಾರ'ಕ್ಕಾಗಿ 40ರ ವಯೋಮಾನದೊಳಗಿನ ಯುವ ಕಥೆಗಾರರಿಂದ ಕಥಾ ಸಂಕಲನಗಳ ಹಸ್ತಪ್ರತಿ ಆಹ್ವಾನಿಸಿದೆ.

ಪುರಸ್ಕಾರವು ಐದು ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದ್ದು, ಹಸ್ತಪ್ರತಿಯು ಕಥೆಗಾರರ ಮೊದಲ ಕಥಾ ಸಂಕಲನವಾಗಿರಬೇಕು. ಯುವ ಕಥೆಗಾರರು ತಮ್ಮ ಐದಕ್ಕಿಂತ ಹೆಚ್ಚು ಕಥೆಗಳನ್ನು ಡಿ.ಟಿ.ಪಿ. ಮಾಡಿ ಬೈಂಡ್ ಮಾಡಿದ ಹಸ್ತಪ್ರತಿಯ ಮೂರು ಪ್ರತಿಗಳನ್ನು ಸೆ.31 ರೊಳಗೆ ವಿಜಯಕಾಂತ ಪಾಟೀಲ, ಪ್ರಧಾನ ಸಂಚಾಲಕರು, ಕನ್ನಡ ಯುವಜನ ಕ್ರಿಯಾ ಸಮಿತಿ, ಚಿಕ್ಕಾಂಶಿ ಹೊಸೂರ-581104, ಹಾನಗಲ್ಲ ತಾಲೂಕು ಹಾವೇರಿ ಜಿಲ್ಲೆ. ಈ ವಿಳಾಸಕ್ಕೆ ಕಳುಹಿಸಬೇಕು. ವಿವರಗಳಿಗೆ ಮೊಬೈಲ್: 9731717430.




ಕೇರಳದ ಮಾಂತ್ರಿಕ ಜ್ಯೋತಿಷ್ಯರು ॐ ✝ ☪

ಕೇರಳದ ಮಳಿಯಾಳಿ ಕುಟ್ಟಿಚ್ಚಾತನ್‌ನಿಂದ ಶೀಘ್ರ ಪರಿಹಾರವಿದೆ.

ಹಲವಾರು ವರ್ಷಗಳಿಂದ ಪ್ರಸಿದ್ಧಿ ಪಡೆದಿರುವ ಇವರು ನಿಮ್ಮ ಭವಿಷ್ಯವನ್ನು ಹಸ್ತ, ಜಾತಕ, ರಾಶಿ ಪ್ರಶ್ನೆ, ಅಷ್ಟಮಂಗಳ ಪ್ರಶ್ನೆಯಿಂದ ತಿಳಿಸುತ್ತಾರೆ. ಉದಾ: ವಿದ್ಯೆ, ಉದ್ಯೋಗ, ವ್ಯಾಪಾರ, ವಿವಾಹ, ಸ್ತ್ರೀ ಪುರುಷ ವಶೀಕರಣ, ಮಾನಸಿಕ ಚಿಂತೆ, ಸಾಲದ ಬಾಧೆ, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಆರೋಗ್ಯ, ಮಾಟ ಕೃತಿಮ, ಬ್ರಹ್ಮ ಪಿಶಾಚಿಗಳಿಗೆ ಹಾಗೂ ಇನ್ನಿತರ ನಿಮ್ಮ ಯಾವುದೇ ರೀತಿಯ ಸಮಸ್ಯೆಗಳಿಗೆ ಶೀಘ್ರ ಪರಿಹಾರಕ್ಕಾಗಿ ಸಂಪರ್ಕಿಸಿ:

ವಿಳಾಸ: ಎಸ್. ಪೊದುವಾಳ್, ಕಾರ್ಲ ಟವರ್ಸ್, 1ನೇ ಮಹಡಿ, ಮಣ್ಣಗೋಪುರ ಬಳಿ ಮುಖ್ಯರಸ್ತೆ, ಕಾರ್ಕಳ (ದ.ಕ.)

ಪ್ರತಿ ತಿಂಗಳು ದಿ. 10 ರಿಂದ 13ರವರೆಗೆ ಹಾಸನದಲ್ಲಿ ಸಂಪರ್ಕಿಸಬಹುದು.

ಮೊ: 98445 54918, 94493 87974
ದೂರವಾಣಿ ಮುಖಾಂತರವು ವಿವರಗಳನ್ನು ಪಡೆಯಬಹುದು

ವಿ.ಸೂ.: ಸ್ತ್ರೀ-ಪುರುಷ ವಶೀಕರಣಕ್ಕೆ, ಗಂಧರ್ವ ಸಂಮ್ಮೋಹಿನಿ ಯಂತ್ರವನ್ನು ಮಾಡಿಕೊಡಲಾಗುವುದು.